aglasem.com

FOR KARNATAKA CLASS 11 PREPARATION

Karnataka 1st PUC Model Question Paper 2027 for Kannada (Paper 1)

EXAM	YEAR	TYPE	SUBJECT
Karnataka Class 11	2027	Sample Paper	Kannada

ಕರ್ನಾಟಕ ಸರ್ಕಾರ

ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ)

2026-27 ನೇ ಸಾಲಿನ ಪ್ರಥಮ ಪಿಯುಸಿ ಮಾದರಿ ಪ್ರಶ್ನೆ ಪತ್ರಿಕೆ - 1

ವಿಷಯ : ಕನ್ನಡ (01) **ಗರಿಷ್ಠ ಅಂಕಗಳು : 80**

ಸಮಯ : 3 ಗಂಟೆಗಳು **ಒಟ್ಟು ಪ್ರಶ್ನೆಗಳು : 52**

ಸೂಚನೆ : "ಅ" ವಿಭಾಗದಲ್ಲಿನ ಪ್ರಶ್ನೆಗಳಿಗೆ ಪ್ರಥಮವಾಗಿ ಬರೆದ ಉತ್ತರಗಳನ್ನು ಮಾತ್ರವೇ ಮೌಲ್ಯಮಾಪನದಲ್ಲಿ ಪರಿಗಣಿಸಲಾಗುವುದು.

ಅ- ವಿಭಾಗ

(ಅ) ಈ ಕೆಳಗಿನ ಎಲ್ಲ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳಲ್ಲಿ ಸರಿಯಾದುದನ್ನು ಆರಿಸಿ ಬರೆಯಿರಿ. **(10X1=10)**

1. ತಪವನ್ನು ಘಟ್ಟಿವಾಳಯ್ಯ ಏನೆಂದು ಕರೆದಿದ್ದಾನೆ?

   ಅ) ಶ್ರದ್ಧೆ ಆ) ಬಂಧನ

   ಇ) ಬಿಡುಗಡೆ ಈ) ಬೇಡಿ

2. ಭ್ರೂಣಾವಸ್ಥೆಯ ಮಗುವನ್ನು ಬೆನ್ನಟ್ಟಿರುವುದು ಯಾವುದು?

   ಅ) ಕಪ್ಪುಕಣ್ಣು ಆ) ಕರಿಯ ನಾಲಿಗೆ

   ಇ) ಕರಿಯುಗುರು ಈ) ಕರಿಯ ಕೈ

3. ಕೋಟಿ ಕಂಠದಲ್ಲಿ ಹಾಡುತ್ತಿರುವುದು

   ಅ) ಹಕ್ಕಿಗಳು ಆ) ಸಸ್ಯಗಳು

   ಇ) ಕಣಿವೆಗಳು ಈ) ಬೆಟ್ಟಗಳು

4. ಅಮ್ಮಿ ಮಗುವಿನಂತೆ ಸಾಕಿದ್ದು

   ಅ) ಗಂಡನನ್ನು ಆ) ಅಮ್ಮನನ್ನು

   ಇ) ಅತ್ತೆಯನ್ನು ಈ) ಅಪ್ಪನನ್ನು

5. "ನನ್ನನ್ನು ಈಗಲಾದರು ಕ್ಷಮಿಸಿಬಿಡು ದೇವರೆ
   ಇವರನ್ನೆಲ್ಲಾ ಮುಟ್ಟಿ- ಮುಟ್ಟಿ ಅಪವಿತ್ರವಾಗುವುದಕ್ಕಿಂತ
   ಮುಟ್ಟಿಸಿಕೊಳ್ಳದೆ ಪವಿತ್ರನಾಗಿರಬೇಕೆಂದುಕೊಂಡಿದ್ದೇನೆ" – **ಈ ಪದ್ಯಭಾಗದಲ್ಲಿ ವ್ಯಕ್ತವಾಗಿರುವ ಭಾವ**

   ಒಂದು : ದೇವರೇ ಕೋಪಿಸಿಕೊಳ್ಳಬಹುದೆಂಬ ಭಯ

   ಎರಡು : ಜಾತಿ ವ್ಯವಸ್ಥೆಯ ಬಗೆಗಿರುವ ವಿಷಾದ

   ಮೂರು : ಪಾಪ – ಪುಣ್ಯದ ಮೇಲಿನ ನಂಬಿಕೆ

   ನಾಲ್ಕು : ಮುಟ್ಟಿಸಿಕೊಳ್ಳಲು ಬಯಸದವರ ಬಗೆಗಿನ ತಿರಸ್ಕಾರ

   ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿದೆ.

   ಅ) ಒಂದು ಮತ್ತು ಮೂರು ಸರಿ ಆ) ಎರಡು ಮತ್ತು ಮೂರು ಸರಿ

   ಇ) ಎರಡು ಮತ್ತು ನಾಲ್ಕು ಸರಿ ಈ) ಒಂದು ಮತ್ತು ಎರಡು ಸರಿ

6. ಗಾಂಧಿಗೆ ಹದಿನೈದು ವರ್ಷಕ್ಕೆ ಪ್ರಪಂಚದ ಮೇಲೆ ಮೂಡಿದುದು

   ಅ) ಜಿಗುಪ್ಸೆ ಆ) ಕಾಳಜಿ

   ಇ) ಅಕ್ಕರೆ ಈ) ಆಕ್ರೋಶ

aglasem.com For more Question Papers, Sample Papers, Notes & Syllabus visit aglasem.com Page 1 of 4

7. "ಜ್ಯೋತಿಷಿಗಳ ಭವಿಷ್ಯವಾಣಿಯು ಓದಲು ತಮಾಷೆಯಾಗಿರುತ್ತದೆ. ಅವು ಅಡ್ಡಗೋಡೆಯ ಮೇಲೆ ದೀಪವಿಟ್ಟಂತೆ ಇದ್ದು ಒಂದಕ್ಕಿಂತ ಹೆಚ್ಚು ಅರ್ಥವನ್ನು ಕೊಡುತ್ತಿರುತ್ತವೆ" – ಈ ಹೇಳಿಕೆಯು ಕೆಳಗಿನ ಯಾವುದನ್ನು ಸಮರ್ಥಿಸುತ್ತದೆ.

   ಅ) ಜ್ಯೋತಿಷ್ಯದ ಮಹತ್ವ ಆ) ಜ್ಯೋತಿಷ್ಯದ ಹೆಚ್ಚುಗಾರಿಕೆ

   ಇ) ಜ್ಯೋತಿಷ್ಯದ ಅನಿಶ್ಚಿತತೆ ಈ) ಜ್ಯೋತಿಷ್ಯದ ಶ್ರೇಷ್ಠತೆ

8. ಬೋಳೇಶಂಕರನ ಅಣ್ಣ-ಅತ್ತಿಗೆಯರಿಗೆ ಉಂಟಾದ ಆಸೆ

   ಅ) ಮನೆಯಿಂದ ನೆಗೆಯುವುದು ಆ) ಮರದಿಂದ ನೆಗೆಯುವುದು

   ಇ) ಬೆಟ್ಟದ ನೆತ್ತಿಯಿಂದ ನೆಗೆಯುವುದು ಈ) ನದಿ ದಡದಿಂದ ನೆಗೆಯುವುದು

9. ತನ್ನನ್ನು ಹಸಿರು ಸಾಮ್ರಾಜ್ಯದ ನಮ್ರ ಪ್ರಜೆ ಎಂದು ಯಾರು-ಯಾರಿಗೆ ಹೇಳಿದರು

   ಅ) ಬೋಳೇಶಂಕರ – ಭಾಗವತ ಆ) ಬೋಳೇಶಂಕರ - ಸಾವ್ಕಾರ

   ಇ) ಬೋಳೇಶಂಕರ - ಸರದಾರ ಈ) ಬೋಳೇಶಂಕರ - ಕೋಡಂಗಿ

10. "ನಾನು ರಾಜನಾದರೆ ರಾಜ್ಯದಲ್ಲಿ ಸೈನ್ಯ ಇರೋದಿಲ್ಲ, ನಾಣ್ಯಗಳು ಇರೋದಿಲ್ಲ, ರಾಜನಿಂದ ಹಿಡಿದು ಎಲ್ಲರೂ ದುಡೀತಾರೆ, ಎಲ್ಲರೂ ಉಣ್ಣುತ್ತಾರೆ. ದುಡಿಯದ ಸೋಂಬೇರಿಗಳಿಗೆಲ್ಲ ಖಂಡಿತ ಅವಕಾಶವಿಲ್ಲ" – ಬೋಳೇಶಂಕರನ ಈ ಮಾತುಗಳು ಕೆಳಗಿನ ಯಾವ ಕಲ್ಪನೆಯನ್ನು ಸಮರ್ಥಿಸುತ್ತಿವೆ.

   ಅ) ಅಸಮಾನ ರಾಜ್ಯದ ಕಲ್ಪನೆ ಆ) ಆದರ್ಶ ರಾಜ್ಯದ ಕಲ್ಪನೆ

   ಇ) ಸರ್ವಾಧಿಕಾರಿ ರಾಜ್ಯದ ಕಲ್ಪನೆ ಈ) ಅರಾಜಕ ರಾಜ್ಯದ ಕಲ್ಪನೆ

(ಆ) ಬಿಟ್ಟ ಸ್ಥಳಗಳಿಗೆ ಕೊಟ್ಟಿರುವ ಉತ್ತರಗಳಲ್ಲಿ ಸೂಕ್ತವಾದುದನ್ನು ಆರಿಸಿ ಬರೆಯಿರಿ. **(5 X 1= 5)**

(ಶೇಡಿಗುಡ್ಡೆ, ಅಂಬವ್ವ, ದೂರ್ವಾಸಮುನಿ, ವೈಶಾಖ ಶುದ್ಧಪೂರ್ಣಿಮೆ, ದೇವೇಂದ್ರ, ಮಾರೀಚ)

11. ಶಾಸ್ತ್ರಿ ಮಾಸ್ತರರ ಹೆಂಡತಿಯ ಹೆಸರು _____

12. ಬುದ್ಧನಿಗೆ ಜ್ಞಾನೋದಯವಾದದ್ದು _____ ದಿನ

13. ರಂಗರಾವ್ ಕೈಗಾರಿಕಾ ತರಬೇತಿ ಶಾಲೆಯನ್ನು _____ ಯಲ್ಲಿ ಸ್ಥಾಪಿಸಿದರು.

14. ಶಕುಂತಲೆಗೆ ಶಾಪ ನೀಡಿದವರು _____

15. ನಾಪಿತನ ಪ್ರಕಾರ ವ್ಯಾಘ್ರಯಜ್ಞವನ್ನು _____ ನು ಮಾಡುತ್ತಿದ್ದಾನೆ.

(ಇ) ಹೊಂದಿಸಿ ಬರೆಯಿರಿ **(5 X 1= 5)**

16. ಅ) ಅಲ್ಲಮಪ್ರಭು	1) ಲೋಕೇಶ ಅಗಸನಕಟ್ಟೆ
ಆ) ನಾ ಬರಿ ಭ್ರೂಣವಲ್ಲ	2) ಜಂಗಮ ಫಕೀರನ ಜೋಳಿಗೆ
ಇ) ಮತ್ತೆ ಸೂರ್ಯ ಬರುತ್ತಾನೆ	3) ಗುಹೇಶ್ವರಾ
ಈ) ಹೊಲಿಗೆ ಯಂತ್ರದ ಅಮ್ಮಿ	4) ಬಸವರಾಜ ವಕ್ಕುಂದ
ಉ) ಜೀವಕೆ ಇಂಧನ	5) ಚೆನ್ನಮಲ್ಲಿಕಾರ್ಜುನಾ
	6) ಮಾಲತಿ ಪಟ್ಟಣಶೆಟ್ಟಿ

ಆ- ವಿಭಾಗ

(ಅ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ **(3 X 2= 6)**

17. ಮಳೆಯನ್ನು ನೋಡಿ ಕನ್ನಯ್ಯ ತನ್ನೊಳಗೆ ಏನೆಂದುಕೊಳ್ಳುತ್ತಾನೆ?
18. ನಾಡಿನ ಬಿಡುಗಡೆಯಲ್ಲಿ ಯಾವುದಕ್ಕೆ ಅಡೆತಡೆಗಳು ಇಲ್ಲವಾಗಿವೆ ?
19. ಮಗುವಿನಲ್ಲಿ ಸಮನಿಸಬೇಕಾದ ಗುಣಗಳು ಯಾವುವು?
20. ಕಾಗದದ ದೋಣಿಗಳಾಗಿ ತೇಲುತ್ತಿರುವುವು ಯಾವುವು?

(ಆ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ **(2 X 2= 4)**

21. ರಾಹುಕಾಲ, ಗುಳಿಕಕಾಲ, ಯಮಗಂಡಕಾಲಗಳ ಬಗ್ಗೆ ಲೇಖಕರ ಅಭಿಪ್ರಾಯವೇನು ?
22. ಮಗಳು ಕನಸು ಲೇಖಕರಿಗೆ ಏನೆಂದು ಶಪಥ ಮಾಡು ಎಂದಳು ?
23. ರಂಗರಾವ್ ಪಂಚಮ ಶಾಲೆಗಳನ್ನು ಎಲ್ಲೆಲ್ಲಿ ತೆರೆದರು ?
24. ನಾಪಿತನು ಹುಲಿಯ ಗುಹೆಯಲ್ಲಿ ಏನೇನನ್ನು ಕಂಡನು ?

(ಇ) ಯಾವುದಾದರೂ ಮೂರು ಪ್ರಶ್ನೆಗಳಿಗೆ ಎರಡು- ಮೂರು ವಾಕ್ಯಗಳಲ್ಲಿ ಉತ್ತರಿಸಿ **(3X2= 6)**

25. ಭಾಗವತ ಬೋಳೇಶಂಕರನನ್ನು ಹೇಗೆ ಪರಿಚಯಿಸುತ್ತಾನೆ ?
26. ಕೋಡಂಗಿಯು ತಾನು ಬೆಳಿಗ್ಗೆಯಿಂದ ಏನೇನು ಕೆಲಸ ಮಾಡಿದೆನೆಂದು ಹೇಳುತ್ತಾನೆ ?
27. ಅನ್ಯರ ದಾಳಿಗಳಿಂದ ಪ್ರಜೆಗಳ ರಕ್ಷಣೆ ಕುರಿತು ಬೋಳೇಶಂಕರನು ಮಂತ್ರಿಗೆ ಹೇಳಿದ್ದೇನು ?
28. ಸೈತಾನನ ಸೈನಿಕ ಬೋಳೇಶಂಕರನ ಪ್ರಜೆಗಳ ಸಿಟ್ಟಿನ ಕುರಿತು ಏನೆಂದು ಹೇಳುತ್ತಾನೆ ?

ಇ- ವಿಭಾಗ

(ಅ) ಯಾವುದಾದರೂ ಎರಡು ಸಾಲುಗಳ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(2X3= 6)**

29. ಗಾಂಡೀವಿಯಲ್ತು ಪಿನಾಕಪಾಣಿಯುಂ ನೆರೆಯನ್
30. ಕಟ್ಟೆಯನು ಕಟ್ಟಿ ನೀರೆರೆದವರು ಯಾರೊ
31. ಮಂತ್ರ ಕಣಾ! ಶಕ್ತಿ ಕಣಾ!

(ಆ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(1X3 =3)**

32. ಲೋ ಹುಡುಗ ಆ ಫೋಟೋ ಯಾರದಯ್ಯ
33. ಮುದ್ದೆ ಮಾಡಲಿಕ್ಕೆ ಪಳಗಿದ ಕೈಗಳೇ ಆಗಬೇಕು
34. ಬೆಳೆಯಲಿ ಬೆಳೆಯದಿರಲಿ ತೆರಿಗೆ ಕಡ್ಡಾಯವಾಯಿತು

(ಇ) ಯಾವುದಾದರೂ ಒಂದು ವಾಕ್ಯದ ಸಂದರ್ಭ ಸೂಚಿಸಿ ಸ್ವಾರಸ್ಯ ಬರೆಯಿರಿ. **(1X3= 3)**

35. ಕೊಳೆತ ಬಲೆ ಹಾಕಿ ಎಳೆದರೂ ಬರುವಂಥವರು
36. ಕೋವಿಗೆ ಜಯವಾಗಲಿ ಅಂತ ಹಾಡ್ತೀರಲ್ಲ ಬುದ್ಧಿ ಇದೆಯ ನಿಮಗೆ?

ಈ- ವಿಭಾಗ

(ಅ) ಯಾವುದಾದರೂ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. **(2X4= 8)**

37. ಬದುಕು ಸಾರ್ಥಕವಾಗಬೇಕಾದರೆ ಯಾವ ಅಂಶಗಳು ಇರಬೇಕೆಂದು ಅಕ್ಕಮಹಾದೇವಿ ಹೇಳುತ್ತಾಳೆ?
38. ಶಿವನು ಚೆನ್ನಯ್ಯನೊಡನುಂಡ ಪ್ರಸಂಗವನ್ನು ವಿವರಿಸಿ.
39. ಕಾಡಿನಲ್ಲಿ ಸೀತೆ ಏನೇನು ಕಾಣಲು ಬಯಸಿದ್ದಳು?
40. ಕೆಳಗಿನ ಪದ್ಯಭಾಗವನ್ನು ಅರ್ಥೈಸಿಕೊಂಡು, ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿರಿ.

aglasem.com For more Question Papers, Sample Papers, Notes & Syllabus visit aglasem.com Page 3 of 4

ಅನೃತಂ ಲೋಭಂ ಭಯಮೆಂ

ಬಿನಿತುಂ ನೀನಿರ್ದ ನಾಡೊಳಿರ್ಕುಮೆ ರವಿನಂ

ದನ ನನ್ನಿ ಚಾಗಮಣ್ಮೆಂ

ಬಿನಿತರ್ಕಂ ನೀನೆ ಮೊತ್ತಮೊದಲಿಗನಾದಯ್

ಅ) ರವಿನಂದನ ಎಂದರೆ ಯಾರು? **(1 ಅಂಕ)**

ಆ) ದುರ್ಯೋಧನನ ಪ್ರಕಾರ ರವಿನಂದನ ಇರುವ ನಾಡಿನಲ್ಲಿ ಏನೇನಿರುವುದಿಲ್ಲ? **(1 ಅಂಕ)**

ಇ) ರವಿನಂದನನ ಉದಾತ್ತ ಗುಣಗಳನ್ನು ದುರ್ಯೋಧನ ಹೇಗೆ ಹೊಗಳಿದ್ದಾನೆ? **(2 ಅಂಕ)**

(ಆ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. **(1X4= 4)**

41. ಮಾಸ್ತರು ಮತ್ತು ಅಂಬವ್ವರ ಪ್ರೀತಿ ಕಡಲಲ್ಲಿ ಕತೆಗಾರರ ಬಾಲ್ಯ ಹೇಗೆ ಕಳೆಯಿತು?

42. ದುಷ್ಯಂತನನ್ನು ನಿರಾಕರಿಸಲು ಶಕುಂತಲೆ ಕೊಡುವ ಕಾರಣಗಳನ್ನು ತಿಳಿಸಿ.

(ಇ) ಯಾವುದಾದರೂ ಒಂದು ಪ್ರಶ್ನೆಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ. **(1X4= 4)**

43. ಬೋಳೇಶಂಕರ ನಾಣ್ಯ ಹಾಗೂ ಸೈನಿಕರನ್ನು ಪಡೆದ ಪ್ರಸಂಗವನ್ನು ವಿವರಿಸಿ.

44. ತಲೆಯಿಂದ ಕೆಲಸ ಮಾಡಬೇಕೆಂಬ ಸೈತಾನನ ಭಾಷಣದ ಸ್ವಾರಸ್ಯವನ್ನು ವಿವರಿಸಿ.

ಊ - ವಿಭಾಗ
(ಭಾಷಾಭ್ಯಾಸ)

(ಅ) ಕೆಳಗಿನ ಪ್ರಶ್ನೆಗಳಲ್ಲಿ ಯಾವುದೇ ನಾಲ್ಕಕ್ಕೆ ಸೂಚನೆಗೆ ಅನುಸಾರವಾಗಿ ಉತ್ತರಿಸಿ. **(4X2= 8)**

45. ಎರಡು ಪದಗಳನ್ನು **ಬಿಡಿಸಿ** ಬರೆಯಿರಿ.
ಕಟ್ಟೋಗರ, ಲೋಕಾಧಿಪತಿ, ದಿವ್ಯಾನ್ನ

46. ಎರಡು ಪದಗಳ **ನಾನಾರ್ಥಗಳನ್ನು** ಬರೆಯಿರಿ.
ಪಾಷಾಣ, ಅಡಿ, ಬಟ್ಟೆ,

47. ಎರಡು ಪದಗಳ **ತದ್ಭವ**ಗಳನ್ನು ಬರೆಯಿರಿ
ಯಾತ್ರೆ, ಚಂದ್ರ, ಆಶ್ಚರ್ಯ

48. ಎರಡು ಪದಗಳ **ವಿರುದ್ಧಾರ್ಥಕ**ಗಳನ್ನು ಬರೆಯಿರಿ.
ಪರಿಚಿತ, ಸ್ವಾರ್ಥ, ಲೌಕಿಕ

49. ಎರಡು **ನುಡಿಗಟ್ಟು**ಗಳನ್ನು ಸ್ವಂತ ವಾಕ್ಯಗಳಲ್ಲಿ ಬಳಸಿ ಬರೆಯಿರಿ
ಕಣ್ಣರಳಿಸು, ಮುಖವಾಡ, ಅಡಿಪಾಯ

50. ಯಾವುದಾದರೂ ಎರಡು **ಅನ್ಯದೇಶ್ಯ ಪದ**ಗಳನ್ನು ಬರೆಯಿರಿ.

(ಆ) ಯಾವುದಾದರೂ ಒಂದು ವಿಷಯ ಕುರಿತು ಪ್ರಬಂಧ ಬರೆಯಿರಿ **(4X1= 4)**

51. ಬರಗಾಲ

ಅಥವಾ

ಕ್ರೀಡೆ ಮತ್ತು ಆರೋಗ್ಯ

(ಇ) ಯಾವುದಾದರೂ ಒಂದು ವಿಷಯ ಕುರಿತು ಪತ್ರ ಬರೆಯಿರಿ **(4X1= 4)**

52. ಆಯಿಷಾ/ಅಮೀರ್, ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜು, ಶಿಕಾರಿಪುರ, ಶಿವಮೊಗ್ಗ ಜಿಲ್ಲೆ ನಿಮ್ಮ ವಿಳಾಸವೆಂದು ಪರಿಗಣಿಸಿ, ನಿಮ್ಮ ಗೆಳತಿ/ಗೆಳೆಯ ಆದ ಯಶೋದ / ಪ್ರಣವ, ಶ್ರೀ ಅನ್ನದಾನೇಶ್ವರ ಪದವಿ ಪೂರ್ವ ಕಾಲೇಜು, ಹೊಳೆ ಸಿರಿಗೆರೆ, ಹರಿಹರ ತಾಲ್ಲೂಕು, ದಾವಣಗೆರೆ ಜಿಲ್ಲೆ 577516.- ಈ ವಿಳಾಸದಲ್ಲಿರುವ ಇವರಿಗೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳ ಉದ್ಘಾಟನಾ ಸಮಾರಂಭಕ್ಕೆ ಆಹ್ವಾನಿಸಿ ಪತ್ರ ಬರೆಯಿರಿ.

ಅಥವಾ

ಸಮರ್ಥ/ಸಮನ್ವಿತ, ಅರಲಹಳ್ಳಿ ಗ್ರಾಮ, ಹೊಸದುರ್ಗ ತಾಲ್ಲೂಕು, ಚಿತ್ರದುರ್ಗ ಜಿಲ್ಲೆ. ಇಲ್ಲಿ ನೀವು ವಾಸವಿದ್ದೀರೆಂದು ಭಾವಿಸಿ ನಿಮ್ಮ ಊರಿಗೆ ಒಂದು ಸುಸಜ್ಜಿವಾದ ಗ್ರಂಥಾಲಯವನ್ನು ನಿರ್ಮಿಸಿಕೊಡುವಂತೆ ವಿನಂತಿಸಿ ಜಿಲ್ಲಾಧಿಕಾರಿಗಳಿಗೆ ಒಂದು ಪತ್ರ ಬರೆಯಿರಿ.